# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರ ಕಛೇರಿ
ಬಿಳಿಕೆರೆ, ಕಾ ಮತ್ತು ಪಾ ಉಪವಿಭಾಗ
ಚಾ.ವಿ.ಸ.ನಿ.ನಿ., ಬಿಳಿಕೆರೆ

ದೂರವಾಣಿ ಸಂಖ್ಯೆ: 08222-240377
E-mail: aeebilikere@rediffmail.com


ಸಂಖ್ಯೆ: ಸ.ಕಾ.ಇಂ(ವಿ)/ತಾಂ.ಸ/ಬಿ.ಉ.ವಿ/ಕ/2017/329 ದಿನಾಂಕ: 17.06.02017

## ದಿನಾಂಕ:17.06.2017 ರಂದು ಚಾ.ವಿ.ಸ.ನಿ.ನಿ., ಬಿಳಿಕೆರೆ ಉಪ ವಿಭಾಗ ಕಚೇರಿ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), 'ಕಾ' ಮತ್ತು 'ಪಾ' ವೃತ್ತ ಚಾ.ವಿ.ಸ.ನಿ.ನಿ ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ವಿದ್ಯುತ್ ಗ್ರಾಹಕರ ಸಂಪರ್ಕ ಸಭೆ ನಡಾವಳಿಗಳು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ರವರ ಅಧ್ಯಕ್ಷತೆಯಲ್ಲಿ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುಣಸೂರು ರವರ ಉಪಸ್ಥಿತಿಯಲ್ಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬಿಳಿಕೆರೆ ಉಪ ವಿಭಾಗ ರವರು ಪ್ರಥಮಾರ್ಥವಾಗಿ ವಿದ್ಯುತ್ ಗ್ರಾಹಕರ ಸಂಪರ್ಕ ಸಭೆಯಲ್ಲಿ ಹಾಜರಿದ್ದ ಹಿರಿಯ ಅಧಿಕಾರಿಗಳು, ಗ್ರಾಹಕ ಬಂಧುಗಳ ಹಾಗೂ ಸಿಬ್ಬಂದಿಗಳಿಗೆ ಸ್ವಾಗತ ಕೋರಿದರು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

### ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ನೌಕರರು

1. ಅಧೀಕ್ಷಕ ಇಂಜಿನಿಯರ್(ವಿ), 'ಕಾ' ಮತ್ತು 'ಪಾ' ವೃತ್ತ ಚಾ.ವಿ.ಸ.ನಿ.ನಿ ಮೈಸೂರು.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹುಣಸೂರು.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ ವಿಭಾಗ, ಚಾ.ವಿ.ಸ.ನಿ.ನಿ., ಬಿಳಿಕೆರೆ
4. ಶಾಖಾಧಿಕಾರಿಗಳು: ಬಿಳಿಕೆರೆ ಶಾಖೆ, ಬೋಳನಹಳ್ಳಿ ಶಾಖೆ, ಕೆ.ಎಸ್.ಗದ್ದಿಗೆ ಶಾಖೆ
5. ಹಿರಿಯ ಸಹಾಯಕರು ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.
6. ಗ್ರಾಹಕರ ಸಲಹಾ ಸಮಿತಿ ಸದಸ್ಯರು.

### ಮಾನ್ಯ ಗ್ರಾಹಕರ ಸಲಹೆ/ಕೋರಿಕೆಗಳು:

1. **ಶ್ರೀ ಉತ್ತಪ್ಪ : ಬಿಳಿಕೆರೆ ಮೊ. ನಂ.: 9901734630** ರವರು ಮಾತನಾಡಿ ಬಿಳಿಕೆರೆ ಫೀಡರ್‌ನಲ್ಲಿ ಪದೆ ಪದೆ ಮಾರ್ಗ ಮುಕ್ತತೆ ( Line clear) ತೆಗೆದುಕೊಳ್ಳುತ್ತಿರುವುದರಿಂದ ಗ್ರಾಹಕರಿಗೆ ವಿದ್ಯುತ್ ಅಡಚಣೆಯಾಗುತ್ತಿದ್ದು ಈ ಸಂಬಂಧ ಮುಂಚಿತವಾಗಿ ಗ್ರಾಹಕರಿಗೆ ತಿಳಿಸಲು ಕೋರಿದರು.

   ಕ್ರಮ: ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಮಾತನಾಡಿ ವಿದ್ಯುತ್ ಮಾರ್ಗಗಳಲ್ಲಿ ತೊಂದರೆಗಳು ಉಂಟಾದಾಗ ಆ ತಕ್ಷಣವೇ ಮಾರ್ಗ ತೊಂದರೆಗಳನ್ನು ಸರಿಪಡಿಸಿ ಗ್ರಾಹಕರಿಗೆ ವಿದ್ಯುತ್ ಸರಬರಾಜು ನೀಡಬೇಕಾಗಿರುತ್ತದೆ. ಈ ನಿಟ್ಟಿನಲ್ಲಿ ಸಂಬಂಧ ಪಟ್ಟ ಮಾರ್ಗದ ಮಾರ್ಗ ಮುಕ್ತತೆ

( Line clear) ಯನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಈ ಸಂಬಂಧ ಗ್ರಾಹಕರಿಗೆ ಮುಂಚಿತವಾಗಿ ತಿಳಿಸಲು Urja mitra ಎಂಬ Soft ware ವ್ಯವಸ್ಥೆಯಲ್ಲಿ ಗ್ರಾಹಕರ ಮೊಬೈಲ್ ನಂಬರ್‌ಗೆ ಸಂದೇಶ ನೀಡುವ ವ್ಯವಸ್ಥೆ ಹಾಲಿ ಚಾಲ್ತಿಯಲ್ಲಿರುವುದನ್ನು ಸದರಿ ಗ್ರಾಹಕರ ಗಮನಕ್ಕೆ ತಂದರು. ಹಾಗೂ ಬೀಳಿಕೆರೆ ಟೌನ್‌ಗೆ ವಿದ್ಯುತ್ ಅಡಚಣೆ ಆಗದಂತೆ ವಿ.ವಿ.ಕೇಂದ್ರದಲ್ಲಿ ಹೊಸ 11ಕೆ.ವಿ ಬ್ರೇಕರ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುವುದಾಗಿಯೂ ಸಹ ತಿಳಿಸಿದರು.

2. **ಶ್ರೀ ನಾಗೇಗೌಡ : ಚಲ್ಲಹಳ್ಳಿ, ಮೊ. ನಂ.: 9880519542** ರವರು ಮಾತನಾಡಿ, ಸಿಬ್ಬಂದಿಗಳು ಕೆಲವು ಸಲ ಗ್ರಾಹಕರ ದೂರವಾಣಿ ಕರೆಯನ್ನು ಸ್ವೀಕರಿಸುವುದಿಲ್ಲ. ಆದ್ದರಿಂದ ಸಿಬ್ಬಂದಿಗಳಿಗೆ ಇಲಾಖೆಯ ಮೊಬೈಲ್ ಫೋನ್ ನೀಡಲು ಕೋರಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು.

3. **ಶ್ರೀ ಚನ್ನೇಗೌಡ : ಕಾಳೇಗೌಡನ ಕೊಪ್ಪಲು ಮೊ. ನಂ. : 9481820659** ರವರು ಮಾತನಾಡಿ ತಮ್ಮ ಐ.ಪಿ ಸ್ಥಾವರಕ್ಕೆ ಕಡಿಮೆ ವೋಲ್ಟೇಜ್ ಸಮಸ್ಯೆ ಇರುವುದಾಗಿ ಹಾಗೂ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡಲು ಕೋರಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು(ವಿ) ರವರು ಸದರಿ ಪ್ರದೇಶದಲ್ಲಿ ಹೆಚ್ಚುವರಿ ಪರಿವರ್ತಕ ಅಳವಡಿಸಲು ಈಗಾಗಲೇ ಅಂದಾಜು ಪಟ್ಟಿ ಮಂಜೂರಾತಿಯಾಗಿದ್ದು UNIP ಏಜೆನ್ಸಿ ರವರಿಂದ ತುರ್ತಾಗಿ ಕಾಮಗಾರಿ ಮುಗಿಸಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಮುಂದುವರೆದು ಬನ್ನಿಕುಪ್ಪೆ ಪ್ರದೇಶದಲ್ಲಿ ಹೊಸ ವಿ.ವಿ.ಕೇಂದ್ರ ಸ್ಥಾಪನೆಗೆ ಈಗಾಗಲೇ ಶಂಕು ಸ್ಥಾಪನೆಯಾಗಿರುವುದಾಗಿಯೂ ಸಹ ಮನವರಿಕೆ ಮಾಡಿಕೊಟ್ಟರು.

4. **ಶ್ರೀ ಟಿ.ಎಂ ನಾಗೇಗೌಡ : ಮಾಜಿ ಗ್ರಾ. ಪಂ. ಸದಸ್ಯರು, ತಿಪ್ಪೂರು, ಮೊ. ನಂ.:9481317806** ರವರು ಮಾತನಾಡಿ ತಮ್ಮ ಜಮೀನು ಮೇಲೆ ಹಾದು ಹೋಗಿರುವ 11 ಕೆ.ವಿ ವಿದ್ಯುತ್ ಮಾರ್ಗವನ್ನು ಸ್ಥಳಾಂತರಿಸಿಕೊಡಲು ಕೊರಿದರು.

   ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಸಭೆಯಲ್ಲಿ ಹಾಜರಿದ್ದ ಸ.ಕಾ.ಇಂ(ವಿ),, ಮತ್ತು ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ವರದಿ ನೀಡಲು ಸೂಚಿಸಿದರು.

5. **ಶ್ರೀ ಶ್ರೀ ಕಂಠ : ಬಿಳಿಕೆರೆ, ಮೊ.ನಂ.: 9945907979** ರವರು ಮಾತನಾಡಿ ಬಿಳಿಕೆರೆ ಟೌನ್ ನಲ್ಲಿ ರಾತ್ರಿ ಪಾಳಿಯಲ್ಲಿ ಕರ್ತವ್ಯ ನಿರ್ವಹಿಸಲು ಸಿಬ್ಬಂದಿ ಮತ್ತು ವಾಹನ ನಿಯೋಜಿಸಲು ಕೋರಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಬಿಳಿಕೆರೆ ಟೌನ್ ಜನಸಂಖ್ಯೆ ಆಧಾರದಲ್ಲಿ ಪಟ್ಟಣ ಪಂಚಾಯಿತಿ ಅಥವಾ ಪುರಸಭೆಯಾಗಿದ್ದಲ್ಲಿ ಸೇವಾ ಕೇಂದ್ರವನ್ನು ತೆರೆಯಲು ಅವಕಾಶವಿದ್ದು ಅಲ್ಲಿಯವರೆಗೆ ಪ್ರಸ್ತುತ ಇರುವ ಸಿಬ್ಬಂದಿಯೇ ವಿದ್ಯುತ್ ಅಡಚಣೆಯನ್ನು ನಿವಾರಿಸುವ ಕರ್ತವ್ಯ ನಿರ್ವಹಿಸುತ್ತಾರೆ ಎಂದು ತಿಳಿಸಿದರು.

6. **ಶ್ರೀ ಚಂದ್ರಶೇಖರ್ : ಮೂಕನಹಳ್ಳಿ ಪಂ. ಮಾಜಿ ಅಧ್ಯಕ್ಷರು : ಮೊ. ನಂ.: 9008770416** ರವರು ಮೂಕನಹಳ್ಳಿ ಭಾಗದಲ್ಲಿ ವಿದ್ಯುತ್ ಸರಬರಾಜು ಇರುವ ರಾಂಪಟ್ಟಣ ವಿದ್ಯುತ್ ಮಾರ್ಗದಲ್ಲಿ ತೊಂದರೆಗಳನ್ನು ಸರಿಪಡಿಸಲು ತುಂಬಾ ಸಮಯದವರೆವಿಗೂ ಮಾರ್ಗ ಮುಕ್ತತೆ ( Line clear) ತೆಗೆದುಕೊಳ್ಳುತ್ತಿರುವುದರಿಂದ ವಿದ್ಯುತ್ ಸರಬರಾಜುವಿನ ಸಮಸ್ಯೆಯಾಗಿರುತ್ತದೆ ಎಂದು ತಿಳಿಸಿದರು.

   **ಕ್ರಮ:** ಇದಕ್ಕೆ ಪ್ರತಿಕ್ರಯಿಸಿದ ಕಾರ್ಯ ನಿರ್ವಾಹಕ ಅಭಿಯಂತರು(ವಿ) ರವರು ಸದರಿ ಮಾರ್ಗದಲ್ಲಿ ಮಾರ್ಗ ತೊಂದರೆಗಳು ಉಂಟಾದಾಗ ಮಾರ್ಗದ G O S ನ್ನು ಉಪಯೋಗಿಸಿ ಮಾರ್ಗ ಮುಕ್ತತೆ ಮಾಡಿಕೊಂಡು ತೊಂದರೆಗಳನ್ನು ಸರಿಪಡಿಸಲು ಸಭೆಯಲ್ಲಿ ಹಾಜರಿದ್ದ ಬೋಳನಹಳ್ಳಿ ಶಾಖಾಧಿಕಾರಿಯವರಿಗೆ ಸೂಚಿಸಿದರು.

7. **ಶ್ರೀ ಈಶ್ವರ್ : ಸಲಹಾ ಸಮಿತಿ ಸದಸ್ಯರು, ಹಾನುಬೋಗನಹಳ್ಳಿ** ರವರು ಹಾಲಿ ಇರುವ ಮಾನ್‌ಸೂನ್‌ಗ್ಯಾಂಗ್‌ಮೆನ್ ಗಳ ಸೇವೆಯನ್ನು ಕಾಯಂಗೊಳಿಸುವಂತೆ ಕೋರಿದರು.

    ಕ್ರಮ: ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಸೇವಾ ಕಾಯಮಾತಿಗೆ ತಮ್ಮ ಹಂತದಲ್ಲಿರುವ ತೊಂದರೆ ಬಗ್ಗೆ ವಿವರಿಸಿದರು. ಹಾಗೂ ಸದರಿ ಕಾರ್ಯವು ಸರ್ಕಾರದ ಮಟ್ಟದಲ್ಲಿ ಆಗುವ ಬಗ್ಗೆ ವಿವರಿಸಿದರು.

8. **ಶ್ರೀಮತಿ ವಸಂತಮ್ಮ : ಸಲಹಾ ಸಮಿತಿ ಸದಸ್ಯರು, ಹನುಮಂತಪುರ** ರವರು ಮಾತನಾಡಿ ಬಿಳಿಕೆರೆ ಉಪ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಗ್ರಾಹಕರ ಸಮಸ್ಯೆಗಳಿಗೆ ಹೆಚ್ಚಾಗಿ ಸ್ಪಂದಿಸುತ್ತಿದ್ದಾರೆಂದು ಪ್ರಶಂಶೆಯ ಮಾತುಗಳನ್ನಾಡಿದರು ಮತ್ತು ಅಸ್ವಾಳು ಬೆಂಕಿಪುರ ಮಾರ್ಗದಲ್ಲಿ ಬಿಳಿ ವೈರ್‌ನಿಂದ ಅನಧಿಕೃತವಾಗಿ ಪಂಪ್ ಸೆಟ್ ಸ್ಥಾವರಗಳಿಗೆ ಸಂಪರ್ಕ ಪಡೆದೂಕೊಂಡಿರುವುದನ್ನು ತಪ್ಪಿಸಬೇಕೆಂದು ತಿಳಿಸಿದರು.

    ಕ್ರಮ: ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು(ವಿ) ರವರು ಸಭೆಯಲ್ಲಿ ಹಾಜರಿದ್ದ ಕೆ.ಎಸ್. ಗದ್ದಿಗೆ ಶಾಖಾಧಿಕಾರಿಯವರಿಗೆ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.

9. **ಸೌಭಾಗ್ಯಮ್ಮ : ಸಲಹಾ ಸಮಿತಿ ಸದಸ್ಯರು, ಬಿಳಿಕೆರೆ** ರವರು ಮಾತನಾಡಿ ಬಿಳಿಕೆರೆ ಉಪ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಗ್ರಾಹಕರ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸುತ್ತಿದ್ದಾರೆಂದು ಪ್ರಶಂಶೆಯ ಮಾತುಗಳನ್ನಾಡಿದರು ಮತ್ತು L E D ಬಲ್ಬ್‌ಗಳ ಮಾರಾಟ ಕೇಂದ್ರವನ್ನು ಪುನಃ ಬಿಳಿಕೆರೆಯಲ್ಲಿ ತೆರೆಯುವಂತೆ ಕೋರಿದರು.

    ಕ್ರಮ: ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಸದ್ಯದಲ್ಲಿಯೇ L E D ಬಲ್ಬ್‌ಗಳ ಪುನರ್ ಮಾರಾಟದ ವ್ಯವಸ್ಥೆ ಮಾಡಿಕೊಡುವುದಾಗಿ ತಿಳಿಸಿದರು.

ಅಂತಿಮವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದು, ಚರ್ಚಿಸಿದ ಹಾಗೂ ತಮ್ಮ ಅಮೂಲ್ಯ ಸಲಹೆ/ಕೋರಿಕೆಗಳನ್ನು ನೀಡಿದ ಎಲ್ಲಾ ಸಲಹಾ ಸಮಿತಿ ಸದಸ್ಯರಿಗೂ ಹಾಗೂ ಗ್ರಾಹಕ ಬಂಧುಗಳಿಗೂ ವಂದಿಸಿದರು.

"ವಂದನೆಗಳೊಂದಿಗೆ"

17/6/17

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ., ಬಿಳಿಕೆರೆ ಉಪವಿಭಾಗ

